**(ಇಂದು ದಿಃ 19-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**
**ಮುಂದುವರೆದ ಮುಖ್ಯ ವಿಚಾರಣೆಃ- ವಾದಿ ಪರ ಶ್ರೀ. ಎಸ್ ಎಸ್ ಕೆ ವಕೀಲರಿಂದಃ-**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯಾಗಿ ಪ್ರತಿಜ್ಞಾ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನ್ನ ತಿಳುವಳಿಕೆಯ ಮೇರೆಗೆ ಬರೆಯಲ್ಪಟ್ಟಿರುತ್ತವೆ ಮತ್ತು ಅವು ಸತ್ಯವಾಗಿರುತ್ತವೆ. ಪ್ರತಿಜ್ಞಾ ಪತ್ರಕ್ಕೆ ಸಹಿ ಮಾಡಿರುತ್ತೇನೆ.

ದಿನಾಂಕಃ 05-01-1979ರ ನೊಂದಾಯಿತ ಖರೀದಿ ಪತ್ರದ ದೃಢಿಕೃತ ನಕಲನ್ನು ನಿಪಿ-1 ಎಂದು, 27 ಪಹಣಿಗಳನ್ನು ನಿಪಿ-2 ರಿಂದ 28 ಎಂದು, ಮುಟೇಷನ್ ರಜೀಸ್ಟರ್ ಅನ್ನು ನಿಪಿ-29 ಎಂದು, ಉಪವಿಭಾಗಧಿಕಾರಿಗಳ ಮುಂದೆ ಸಲ್ಲಿಸಿದ್ದ ಮೇಲ್ಮನವಿಯ ದೃಢಿಕೃತ ನಕಲನ್ನು ನಿಪಿ-30 ಎಂದು, ಅರ್ಜಿಯದೃಢಿಕೃತ ನಕಲನ್ನು ನಿಪಿ-31 ಎಂದು, ಅರ್ಜಿಗೆ ಸಲ್ಲಿಸಿದ ತಕರಾರಿನ ದೃಢಿಕೃತ ನಕಲನ್ನು ನಿಪಿ-32 ಎಂದು, ಉಪವಿಭಾಗಾಧಿಕಾರಿಗಳ ಮುಂದೆ ಸಲ್ಲಿಸಿದ್ದ ಅಪೀಲ ನಂಬರ 83/23ರಲ್ಲಿನ ಅಪೀಲ ಮೆಮೋದ ದೃಢಿಕೃತ ನಕಲನ್ನು ನಿಪಿ-33 ಎಂದು, ಅರ್ಜಿಯ ದೃಢಿಕೃತ ನಕಲನ್ನು ನಿಪಿ-34 ಎಂದು, ಅರ್ಜಿಗೆ ಸಲ್ಲಿಸಿದ್ದ ತಕರಾರಿನ ದೃಢಿಕೃತ ನಕಲನ್ನು ನಿಪಿ-35 ಎಂದು, ಉಪವಿಭಾಗಧಿಕಾರಿ ಸೇಡಂರವರು ದಿನಾಂಕಃ29-02-2024ರಂದು ಮಾಡಿದ ಆದೇಶದ ದೃಢಿಕೃತ ನಕಲನ್ನು ನಿಪಿ-36 ಎಂದು, ಉಪವಿಭಾಗಧಿಕಾರಿ ಸೇಡಂರವರು ದಿನಾಂಕಃ29-02-2024ರಂದು ಅಪೀಲ ನಂಬರ 83/23-24ರಲ್ಲಿ ಮಾಡಿದ ಆದೇಶದ ದೃಢಿಕೃತ ನಕಲನ್ನು ನಿಪಿ-37 ಎಂದು, ಅಪೀಲ ನಂಬರ 82/23ರಲ್ಲಿ ಸಲ್ಲಿಸಿದ ಅರ್ಜಿಯ ನಕಲನ್ನು ನಿಪಿ-38 ಎಂದು, ಅಪೀಲ ನಂಬರ 83/23ರಲ್ಲಿ ಸಲ್ಲಿಸಿದ ಅರ್ಜಿಯ ನಕಲನ್ನು ನಿಪಿ-39 ಎಂದು, 2 ಮುಟೇಷನ್ ರಜೀಸ್ಟರ್ ಗಳನ್ನು ನಿಪಿ-40 ಮತ್ತು 41ಎಂದು, ದಿನಾಂಕಃ02-11-2023ರಂದು ತಹಸಿಲ್ದಾರ ಸೇಡಂ ರವರು ನೀಡಿದ ಹಿಬರಹವನ್ನು ನಿಪಿ-42 ಎಂದು, ದಿನಾಂಕಃ22-11-2023ರಂದು ತಹಸಿಲ್ದಾರ ಸೇಡಂ ರವರು ನೀಡಿದ ಹಿಬರಹವನ್ನು ನಿಪಿ-43 ಎಂದು, ದಿನಾಂಕಃ17-03-2024ರಂದು ತಹಸಿಲ್ದಾರ ಸೇಡಂ ರವರು ನೀಡಿದ ಹಿಬರಹವನ್ನು ನಿಪಿ-44 ಎಂದು,

ದಿನಾಂಕಃ 01-10-2018ರ ನೊಂದಣಿ ಇಲ್ಲದ ವಿಭಾಗ ಪತ್ರ ಹಾಜರು ಪಡಿಸಿರುತ್ತೇನೆ, ಪ್ರತಿವಾದಿ ಪರ ವಕೀಲರು ಸದರಿ ದಾಖಲಾತಿ ನೊಂದಣಿ ಆಗಿಲ್ಲ ಎಂದು

ತಕರಾರು ಎತ್ತಿರುತ್ತಾರೆ. ಮುದ್ರಾಂಕ ಶುಲ್ಕ ಮತ್ತು ದಂಡ ಪಾವತಿ ಸಲುವಾಗಿ ವಾದವಿವಾದ ಆಲಿಸಲಾಯಿತು.

**(ವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**